# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ , ಹಿರಿಯೂರು

ಸಿ ಸಿ ನಂ. 899/2020

| | | | |
|---|---|---|---|
| ಹೆಸರು | - | ರಾಘವೇಂದ್ರ ಕೆ ಆರ್ | CW-15<br>PW- 2 |
| ತಂದೆ ಹೆಸರು | - | ರುದ್ರಪ್ಪ ಕೆ | |
| ವಯಸ್ಸು | - | 43 ವರ್ಷ | |
| ಉದ್ಯೋಗ | - | ಸಿ ಪಿ ಐ ಶಿರಾ ಗ್ರಾಮಾಂತರ ಠಾಣೆ | |
| ವಾಸಸ್ಥಳ | - | ಶಿರಾ ಟೌನ್ | |

ದಿನಾಂಕಃ26.11.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ನಾನು ದಿಃ09.03.2020 ರಿಂದ 16.09.2021 ರವರೆಗೆ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ10.03.2020 ರಂದು ಈ ಪ್ರಕರಣದ ಕಡತವನ್ನು ಚಾಸಾ.14 ರವರಿಂದ ಕಡತ ಪಡೆದು ತನಿಖೆ ಮುಂದುವರೆಸಿರುತ್ತೇನೆ. ದಿಃ19.03.2020 ರಂದು ಪಿರ್ಯಾದಿ ರವರ ಮರುಹೇಳಿಕೆ ಪಡೆದಿರುತ್ತೇನೆ. ಚಾಸಾ.2 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ.9 ರವರಿಂದ ಮೃತ ಪ್ರೇಮಣ್ಣನವರ ಪಿ ಎಂ ವರದಿಯನ್ನು ಹಿರಿಯೂರು ಸರ್ಕಾರ ಆಸ್ಪತ್ರೆಯಿಂದ ಸ್ವೀಕರಿಸಿರುತ್ತೇನೆ. ಸದರಿ ಪಿ ಎಂ ವರದಿಯನ್ನು ನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದೇ ದಿನ

ಚಾಸಾ.10 ರವರಿಂದ ಐ ಎಂ ವಿ ವರದಿ ಸ್ವೀಕರಿಸಿರುತ್ತೇನೆ. ಸದರಿ ದಾಖಲೆಯನ್ನು ನಿಪಿ-2 ಎಂದು ಸಹಿಯನ್ನುನಿಪಿ.2(ಎ) ಎಂದು ಗುರುತಿಸಲಾಯಿತು. ಅದೇ ದಿನ ತನಿಖೆ ಪೂರ್ಣಗೊಳಿಸಿ ಆರೋಪಿ ವಿರುದ್ದ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಕೆ ವಕೀಲರಿಂದಃ**

ದಿಃ10.03.2020 ರಂದು ಈ ಪ್ರಕರಣದ ಕಡತವನ್ನು ಚಾಸಾ.14 ರವರಿಂದ ಪಡೆದು ತನಿಖೆ ಮುಂದುವರೆಸಿಲ್ಲ ಎಂದರೆ ಸರಿಯಲ್ಲ. ದಿಃ19.03.2020 ರಂದು ಪಿರ್ಯಾದಿ ರವರ ಮರುಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ.2 ರವರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ

ದಿನ ಚಾಸಾ.9 ರವರಿಂದ ಮೃತ ಪ್ರೇಮಣ್ಣನವರ ಪಿ ಎಂ ವರದಿಯನ್ನು ಹಿರಿಯೂರು ಸರ್ಕಾರ ಆಸ್ಪತ್ರೆಯಿಂದ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಚಾಸಾ.10 ರವರಿಂದ ಐ ಎಂ ವಿ ವರದಿ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು